# ಆವಾರಿಯ ಜಾತಕ

ಸ್ವಾಮಿ ವೀರೇಶಾನಂದ



ಬುದ್ಧ ಭಗವಾನರು ಜೇತವನದಲ್ಲಿ ಅಡ್ಡಾಡುತ್ತಿದ್ದರು. ಆಗ ಒಬ್ಬ ನಾವಿಕನ ಕಥೆಯನ್ನು ಹೇಳುತ್ತಿದ್ದರು. ಮೊದಲು ಅವನ ಇಂದಿನ ಜನ್ಮದ ಕಥೆ ಹೇಳಿದರು:

ಆ ನಾವಿಕನು ಮೂರ್ಖ. ಅವನಿಗೆ ಬುದ್ಧ ಮುಂತಾದ ಮಹಾತ್ಮರ ಬಗ್ಗೆ ಒಳ್ಳೆಯ ಅಭಿಪ್ರಾಯವಿರಲಿಲ್ಲ. ಅವನೊಬ್ಬ ಕಠೋರ ವ್ಯಕ್ತಿ. ಕೋಪಗೊಳ್ಳುವ ಗುಣ ಅದು. ಒಬ್ಬ ಬೌದ್ಧ ಭಿಕ್ಷು ಅಚಿರವತೀ ಎಂಬ ನದಿಯನ್ನು ದಾಟಬೇಕಾಗಿತ್ತು. ಅದರಾಚೆ ಇರುವ ವಿಹಾರದಲ್ಲಿದ್ದ ಬುದ್ಧದೇವನನ್ನು ಕಾಣಲು ಅವನು ಕಾತರನಾಗಿದ್ದನು. ಈ ನಾವಿಕನನ್ನು ಕುರಿತು, ''ನನ್ನನ್ನು ನದಿ ದಾಟಿಸು'' ಎಂದು ಕೇಳಿಕೊಂಡನು. ಅದಕ್ಕೆ ನಾವಿಕನು, ''ಪೂಜ್ಯರೇ, ಇದು ನದಿ ದಾಟುವುದಕ್ಕೆ ಸಮಯವಲ್ಲ. ಇಲ್ಲೇ ಎಲ್ಲಾದರೂ ತಂಗಿಕೊಳ್ಳಿ'' ಎಂದನು. ಅದಕ್ಕೆ ಆ ಭಿಕ್ಷುವು ಒಪ್ಪಲಿಲ್ಲ. ''ಇಲ್ಲಿ ನನಗೆ ತಂಗುವುದಕ್ಕೆ ಯಾವುದೇ ಸ್ಥಳ ದೊರಕುವುದಿಲ್ಲ. ನನ್ನನ್ನು ನೀನು ಆಚೆಯ ದಡಕ್ಕೆ ಕರೆದುಕೊಂಡು ಹೋಗಲೇಬೇಕು'' ಎಂದು ಹಠ ಹಿಡಿದನು.

ಆಗ ಈ ನಾವಿಕನು ಬಹಳ ಕೋಪಗೊಂಡನು. ''ಬಾರೋ ಶ್ರಮಣ, ಕರೆದೊಯ್ಯುತ್ತೇನೆ'' ಎಂದು ಅವನನ್ನು ದೋಣಿಯಲ್ಲಿ ಕೂಡಿಸಿಕೊಂಡನು. ನೇರ ದಾರಿಯಲ್ಲಿ ದಡ ದಾಟಿಸದೆ, ನದಿಯ ಕೆಳಭಾಗಕ್ಕೆ ಕರೆದುಕೊಂಡು ಹೋದನು. ನೌಕೆಯು ವಿಪರೀತ ಅಲ್ಲಾಡುವಂತೆ ಮಾಡಿದನು. ಬೌದ್ಧ ಭಿಕ್ಷುವಿನ ಬಟ್ಟೆ ಮತ್ತು ಭಿಕ್ಷಾಪಾತ್ರೆಗಳನ್ನು ನೆನೆಸಿಬಿಟ್ಟನು. ಈ ರೀತಿ ಭಿಕ್ಷುವಿಗೆ ಕಷ್ಟವನ್ನು ಕೊಟ್ಟು , ಕತ್ತಲೆಯಾದ ನಂತರವೇ ಆಚೆಯ ದಡಕ್ಕೆ ಬಂದು ಸೇರಿಸಿದನು. ಭಿಕ್ಷುವು ನೆನೆದುಕೊಂಡು ವಿಹಾರವನ್ನು ತಲುಪಿದನು. ಅಂದಿನ ದಿನ ಅವನಿಗೆ ಬುದ್ಧನ ಸೇವೆಯ ಭಾಗ್ಯ ಲಭಿಸಲಿಲ್ಲ. ಮಾರನೆಯ ದಿವಸ ಭಗವಾನರ ಹತ್ತಿರ ಹೋಗಿ, ಪ್ರಣಾಮಗಳನ್ನು ಸಲ್ಲಿಸಿ, ಸುಮ್ಮನೆ ಕುಳಿತುಬಿಟ್ಟನು. ಬುದ್ಧ ಭಗವಾನರು ಅವನ ಕುಶಲವನ್ನು ವಿಚಾರಿಸಿದರು. ''ಈಗ ಬಂದೆಯಾ?'' ಎಂದು ಕೇಳಿದರು. ''ಇಲ್ಲ ಸ್ವಾಮಿ, ನಿನ್ನೆಯೇ ಬಂದೆ'' ಎಂದನು. ಬುದ್ಧ ಭಗವಾನರು ನಡೆದ ವಿಷಯವನ್ನೆಲ್ಲ ಕೇಳಿ ತಿಳಿದರು. ಆ ನಾವಿಕ ಈ ಜನ್ಮದಲ್ಲಿ ಮಾತ್ರವಲ್ಲ ; ನಿನ್ನ ಹಿಂದಿನ ಜನ್ಮದಲ್ಲಿಯೂ ನಿನಗೆ ಬಹಳಷ್ಟು ತೊಂದರೆ ಕೊಟ್ಟಿ

ದ್ದಾನೆ'' ಎಂದರು. ಬೌದ್ಧ ಭಿಕ್ಷುವು ''ಅದು ಹೇಗೆ?'' ಎಂದು ಕೇಳಲು, ಅವರು ನಾವಿಕನ ಹಿಂದಿನ ಕಥೆಯನ್ನು ಹೇಳಲು ಆರಂಭಿಸಿದರು:

ಆ ಕಾಲದಲ್ಲಿ ಬ್ರಹ್ಮದತ್ತನು ವಾರಣಾಸಿಯನ್ನು ಆಳುತ್ತಿದ್ದನು. ಬೋಧಿಸತ್ವನು ಬ್ರಾಹ್ಮಣಕುಲದಲ್ಲಿ ಹುಟ್ಟಿದ್ದನು. ತಕ್ಷಶಿಲೆಯಲ್ಲಿ ಎಲ್ಲ ವಿದ್ಯೆಗಳನ್ನೂ ಕಲಿತು ಪಾರಂಗತನಾದನು. ಋಷಿಯ ವ್ರತವನ್ನು ಮಾಡಿ, ಹಿಮಾಲಯಕ್ಕೆ ಹೋದನು. ಬಹಳ ಕಾಲ ತಪಸ್ಸು ಮಾಡಿದನು. ಕಂದ-ಮೂಲಗಳನ್ನು ತಿಂದುಕೊಂಡಿದ್ದನು. ಒಮ್ಮೆ ಉಪ್ಪು-ಹುಳಿಯ ರುಚಿಯನ್ನು ಸವಿಯಲೆಂದು ವಾರಾಣಸಿಗೆ ಬಂದನು. ರಾಜನ ತೋಟದಲ್ಲಿ ತಂಗಿದನು. ಮರುದಿನ ಭಿಕ್ಷೆಗೆಂದು ಹೊರಟನು. ರಾಜಾಂಗಣವನ್ನು ಪ್ರವೇಶಿಸಿದ ಅವನನ್ನು ಕಂಡು, ರಾಜನು ಸುಪ್ರೀತನಾದನು. ಅವನ ನಡವಳಿಕೆಯಿಂದ ಮುದಗೊಂಡನು. ಪ್ರಸನ್ನನಾಗಿ, ಅಂತಃಪುರಕ್ಕೆ ಕರೆದುಕೊಂಡು ಹೋದನು. ರುಚಿರುಚಿಯಾಗಿ ಭೋಜನ ಮಾಡಿಸಿದನು. ರಾಜೋದ್ಯಾನದಲ್ಲಿಯೇ ಅವನ ವಸತಿಗೆ ಅನುವು ಮಾಡಿಕೊಟ್ಟನು. ಪ್ರತಿನಿತ್ಯವೂ ಅವನ ಸೇವೆಗೆ ಹೋಗುತ್ತಿದ್ದನು.

ಬೋಧಿಸತ್ವನು ರಾಜನಿಗೆ ಹೀಗೆ ಉಪದೇಶ ಮಾಡಿದನು: ''ಮಹಾರಾಜ, ರಾಜ್ಯಭಾರ ಮಾಡುವಾಗ ಪ್ರಮಾದ ಮಾಡಬಾರದು. ಕ್ಷಮೆ, ಮೈತ್ರಿ, ಹಾಗೂ ದಯೆಯಿಂದ ರಾಜ್ಯಭಾರ ಮಾಡಬೇಕು. ಧರ್ಮದಿಂದ ಆಳಬೇಕು.'' ಅವನು ಮತ್ತೂ ಹೀಗೆ ಹೇಳಿದನು: ''ಹೇ ರಾಜ, ಕೋಪಗೊಳ್ಳದಿರು; ಏನೇ ಆದರೂ ಕೋಪಗೊಳ್ಳದಿರು. ತನ್ನ ಮೇಲೆ ಕೋಪಗೊಂಡವನ ವಿಷಯದಲ್ಲಿಯೂ ಯಾರು ಕೋಪಗೊಳ್ಳುವುದಿಲ್ಲವೋ, ಅಂಥ ರಾಜನು ತನ್ನ ದೇಶದಲ್ಲಿ ಪೂಜ್ಯನಾಗುತ್ತಾನೆ. ನಾನು ಎಲ್ಲ ಕಡೆ ಇದನ್ನೇ ಉಪದೇಶ ಮಾಡುವುದು. ಅದು ಹಳ್ಳಿಯಾಗಲಿ, ಅರಣ್ಯವಾಗಲಿ, ಕೆಳಗಿನ ಸ್ಥಾನವಾಗಿರಲಿ, ಉನ್ನತಸ್ಥಾನವಾಗಿರಲಿ ಕೋಪಗೊಳ್ಳಬೇಡ ಎನ್ನುವ ಉಪದೇಶವನ್ನೇ ನಾನು ಯಾವತ್ತೂ ಮಾಡುತ್ತೇನೆ.''

ಹೀಗೆ ರಾಜ ಬಂದಾಗಲೆಲ್ಲ ಈ ರೀತಿಯ ಉಪದೇಶಗಳನ್ನು ಬೋಧಿಸತ್ವನು ಮಾಡುತ್ತಿದ್ದನು. ಇದರಿಂದ ರಾಜನಿಗೆ ಬಹಳ ಸಂತೋಷವಾಯಿತು. ಅವನು ಒಂದು ಹಳ್ಳಿಯನ್ನು ಬೋಧಿಸತ್ವನಿಗೆ ದಾನ ಮಾಡಿದನು. ಆದರೆ ಭಗವಾನ್ ಅದನ್ನು ಸ್ವೀಕರಿಸಲಿಲ್ಲ. ಬೋಧಿಸತ್ವನು ಹನ್ನೆರಡು ವರ್ಷಗಳ ಕಾಲ ಅಲ್ಲಿಯೇ ವಾಸವಾಗಿದ್ದನು. ಒಂದು ದಿನ ಹಳ್ಳಿಗಳ ಕಡೆಗೆ ಹೋಗಿ ನೋಡಿಕೊಂಡು ಬರಬೇಕೆಂದು ಅವನಿಗೆ ಆಸೆಯಾಯಿತು. ರಾಜನಿಗೆ ತಿಳಿಸಿದರೆ, ಅವನು ಒಪ್ಪಿಗೆ ನೀಡುವುದಿಲ್ಲವೆಂದು, ಅವನು ತೋಟದ ಮಾಲಿಯನ್ನು ಕರೆದು ಹೇಳಿದನು: ''ಅಯ್ಯಾ, ನಾನು ಜನಪದದ ಗ್ರಾಮಗಳಲ್ಲಿ ಸುತ್ತಾಡಿಕೊಂಡು ಬರುತ್ತೇನೆ. ದಯವಿಟ್ಟು ರಾಜನಿಗೆ ಈ ಸಮಾಚಾರವನ್ನು ಹೇಳು.''

ಬೋಧಿಸತ್ವನು ಗಂಗೆಯ ತಟಕ್ಕೆ ಬಂದನು. ಅಲ್ಲಿ ಆವಾರಿಯಪಿತ ಎನ್ನುವ ನಾವಿಕನು ಇದ್ದನು. ಅವನೊಬ್ಬ ಮೂಢ. ಮಹಾತ್ಮರ ಸದ್ಗುಣಗಳ ಪರಿಚಯ ಅವನಿಗೆ ಇರಲಿಲ್ಲ. ಜನರೊಂದಿಗೆ ಸ್ನೇಹಪೂರ್ವಕವಾಗಿ ವರ್ತಿಸಿ, ಒಳ್ಳೆಯ ವ್ಯವಹಾರವನ್ನು ಕುದುರಿಸಿಕೊಳ್ಳುವ ಕಲೆ ಅವನಿಗೆ ತಿಳಿಯದು. ದೋಣಿಗೆ ಬರುವ ಜನರೊಂದಿಗೆ ಸದಾ ಜಗಳವಾಡುತ್ತಿದ್ದ.

ಈ ಮೂರ್ಖನನ್ನು ಕಂಡು ಬೋಧಿಸತ್ವನಿಗೆ ಕರುಣೆ ಉಕ್ಕಿ ಬಂತು. ಅವರು ಈ ಮಾತನ್ನು ಆಡಿದರು:

''ಮಗೂ, ನನ್ನನ್ನು ಆಚೆಯ ದಡಕ್ಕೆ ಮುಟ್ಟಿಸು.'' ಇದಕ್ಕೆ ನಾವಿಕ ಹೇಳಿದ: ''ಶ್ರಮಣನೇ, ನನಗೆ ದಾಟಿಸಿದ್ದಕ್ಕೆ ಬಾಡಿಗೆ ಕೊಡುತ್ತೀಯೇನು?''

ಅದಕ್ಕೆ ಬೋಧಿಸತ್ವನು ಹೇಳಿದನು: ''ಅಪ್ಪಾ ನಾನು ನಿನಗೆ ಭೋಗವೃದ್ಧಿ, ಅರ್ಥವೃದ್ಧಿ ಹಾಗೂ ಧರ್ಮವೃದ್ಧಿಗಳು ಆಗುವಂತೆ ಒಂದು ಉಪಾಯ ಹೇಳುತ್ತೇನೆ.''

ನಾವಿಕ ಭಾವಿಸಿದ, ಇವನು ಏನಾದರೂ ಖಂಡಿತ ಕೊಡುತ್ತಾನೆ ಎಂದು. ''ಆಯಿತು, ದಡ ದಾಟಿಸಿದ ಮೇಲೆ ಬಾಡಿಗೆಯನ್ನು ಕೊಡು'' ಎಂದು ದೋಣಿಯ ಮೇಲೆ ಹತ್ತಿಸಿಕೊಂಡ. ನದಿ ದಾಟಿಸಿ, ''ಕೂಲಿಯನ್ನು ಕೊಡು'' ಎಂದು ಕೇಳಿದ. ಇದಕ್ಕೆ ಬೋಧಿಸತ್ವನು ಭೋಗವೃದ್ಧಿಯ ಉಪಾಯವನ್ನು ಉಪದೇಶಿಸಿದನು:

''ಅಯ್ಯಾ ನಾವಿಕ! ನೀನು ಜನರನ್ನು ದಾಟಿಸುವ ಮೊದಲೇ, ಅವರು ದಡದಲ್ಲಿ ಇರುವಾಗಲೇ ಬಾಡಿಗೆಯನ್ನು ಕೇಳಬೇಕು. ನದಿ ದಾಟಬೇಕು ಎನ್ನುವವರ ಮನಸ್ಸು ಬೇರೆಯ ರೀತಿ ಇರುತ್ತದೆ. ಅವರು ದಾಟಿಯಾದ ಮೇಲೆ ಅವರ ಮನಸ್ಸು ಬೇರೆಯೇ ರೀತಿ ಇರುತ್ತದೆ.''

ಇದನ್ನು ಕೇಳಿದ ನಾವಿಕನ ಮನಸ್ಸನ್ನೇನೂ ಈ ಉಪದೇಶ ತಟ್ಟಲಿಲ್ಲ. ಇದು ಬರಿಯ ಉಪದೇಶ. ಈಗ ಏನನ್ನಾದರೂ ಕೊಡುತ್ತಾನೆ ಎಂದುಕೊಂಡ. ಬೋಧಿಸತ್ವ, ''ಮಗುವೇ, ಇದು ಭೋಗವೃದ್ಧಿಯ ಉಪದೇಶ. ಈಗ ನಾನು ಅರ್ಥವೃದ್ಧಿ ಮತ್ತು ಧರ್ಮವೃದ್ಧಿಯ ಉಪಾಯವನ್ನು ಹೇಳಿಕೊಡುತ್ತೇನೆ'' ಎಂದ.

''ಅಪ್ಪಾ, ನೀನು ಕೋಪಗೊಳ್ಳಬಾರದು. ನೀನು ಎಲ್ಲಿಯೇ ಇರು - ಹಳ್ಳಿಯಲ್ಲಿಯಾಗಲಿ, ಅರಣ್ಯದಲ್ಲಾಗಲಿ, ಕೆಳಜಾಗದಲ್ಲಾಗಲಿ, ಉನ್ನತ ಜಾಗದಲ್ಲಾಗಲಿ - ಎಲ್ಲಿಯೇ ಇದ್ದರೂ, ನಾನು ಉಪದೇಶ ಮಾಡುವುದು ಇದನ್ನೇ : ಯಾವ ಸಂದರ್ಭದಲ್ಲಿಯೂ ಕೋಪ ಮಾಡಿಕೊಳ್ಳಬೇಡ.

''ಅಯ್ಯಾ, ಈ ಉಪದೇಶದಿಂದ ನಿನಗೆ ಅರ್ಥ ಹೆಚ್ಚಾಗುತ್ತದೆ; ಧರ್ಮ ಸಂಪಾದನೆಯೂ ಆಗುತ್ತದೆ'' ಎಂದ ಬೋಧಿಸತ್ವ. ದುಷ್ಟನಾದ ನಾವಿಕನಿಗೆ ಬೋಧಿಸತ್ವನ ಮಾತುಗಳು ಅರ್ಥ

ವಾಗಲೇ ಇಲ್ಲ. ‘‘ಶ್ರಮಣ, ನದಿ ದಾಟಿಸಿದ್ದಕ್ಕೆ ನೀನು ನನಗೆ ಕೊಡುವ ಬಾಡಿಗೆ ಇದೇ ಏನು?’’ ಎಂದು ಗುಡುಗಿದ.

‘‘ಹೌದು, ಮಗು.’’

‘‘ಈ ಬಾಡಿಗೆ ನನಗೆ ಬೇಕಾಗಿಲ್ಲ. ಇದರಿಂದ ನನಗೆ ಏನೂ ಪ್ರಯೋಜನವಿಲ್ಲ. ನನಗೆ ಬೇರೆ ಏನನ್ನಾದರೂ ಕೊಡು.’’

‘‘ಮಗೂ, ನನ್ನ ಹತ್ತಿರ ಇದನ್ನು ಬಿಟ್ಟರೆ ಬೇರೇನೂ ಇಲ್ಲ.’’

‘‘ಹಾಗಿದ್ದರೆ, ನೀನು ದೋಣಿ ಏಕೆ ಹತ್ತಿದೆ?’’ ಎಂದ ನಾವಿಕ, ಬೋಧಿಸತ್ವನನ್ನು ನೀರಿಗೆ ನೂಕಿದ. ಅವನ ಎದೆಯ ಮೇಲೆ ಕುಳಿತು, ಮುಖಕ್ಕೆ ಚೆನ್ನಾಗಿ ಬಡಿದ.

ಬುದ್ಧ ಭಗವಾನರು ಈ ಕಥೆಯನ್ನು ಭಿಕ್ಷುವಿಗೆ ಹೇಳಿದರು. ‘‘ನೋಡಿದೆಯಾ, ಉಪದೇಶ ಮಾಡಿದ ಆ ಶ್ರಮಣನು ರಾಜನಿಂದ ಹಳ್ಳಿಯನ್ನೇ ಪಡೆದುಕೊಳ್ಳುವುದರಲ್ಲಿದ್ದ. ಆದರೆ ಉಪದೇಶ ಮಾಡಿದ್ದಕ್ಕೆ ಮೂರ್ಖ ನಾವಿಕ ಕೊಟ್ಟದ್ದೇನು? ಬೈಗುಳ, ಹೊಡೆತ. ಆದ್ದರಿಂದ ಯೋಗ್ಯರಾದವರಿಗೆ ಉಪದೇಶ ಮಾಡಬೇಕೇ ಹೊರತು, ಅಪಾತ್ರರಿಗೆ ಬೋಧನೆ ಮಾಡಬಾರದು.’’ ಈ ಬಗ್ಗೆ ಬುದ್ಧ ಭಗವಾನರು ಒಂದು ಮಾತು ಹೇಳಿದರು:

‘‘ಯಾವ ಉಪದೇಶ ಮಾಡಿ ರಾಜನಿಂದ, ಒಳ್ಳೆಯ ಗ್ರಾಮವೊಂದನ್ನು ಪಡೆದುಕೊಂಡನೋ, ಅದೇ ಉಪದೇಶವನ್ನು ಮಾಡಿದ ಕಾರಣ, ಆ ತಾಪಸಿಯು ನಾವಿಕನಿಂದ ಮುಖದ ಮೇಲೆ ಹೊಡೆತ ತಿಂದನು.’’

ಹೀಗೆ ಹೇಳಿ, ಬುದ್ಧ ಭಗವಾನರು ಕಥೆ ಮುಂದುವರೆಸಿದರು: ‘‘ನಾವಿಕನು ತಾಪಸಿಯನ್ನು ಹೊಡೆಯುತ್ತಿರುವಾಗ, ಆತನ ಹೆಂಡತಿ ಅವನಿಗೆ ಊಟ ತೆಗೆದುಕೊಂಡು ಬಂದಳು. ತನ್ನ ಗಂಡನನ್ನು ಕುರಿತು, ‘ಇವರಿಗೆ ರಾಜನೇ ಸನ್ಮಾನ ಮಾಡಿದ್ದಾನೆ. ಇವರಿಗೆ ಹೊಡೆಯಬೇಡಿ’ ಎಂದು ಕೇಳಿಕೊಂಡಳು. ನಾವಿಕನಿಗೆ ಇದರಿಂದ ಹೆಂಡತಿಯ ಮೇಲೆಯೇ ಕೋಪ ಬಂತು. ಇವನನ್ನು ಹೊಡೆಯಲು ಬಿಡುತ್ತಿಲ್ಲ ಎಂದು ತನ್ನ ಹೆಂಡತಿಯನ್ನೇ ಹೊಡೆದು ಬೀಳಿಸಿಬಿಟ್ಟ. ಅವಳು ತಂದಿದ್ದ ಊಟದ ಪಾತ್ರೆ ಬಿದ್ದು ಒಡೆದುಹೋಯಿತು. ಗರ್ಭಿಣಿಯಾಗಿದ್ದ ಅವಳಿಗೆ ಗರ್ಭಪಾತವಾಯಿತು. ಕೊಲೆ ಮಾಡುವವ, ಕಳ್ಳ ಎಂದು ಜನ ಅವನನ್ನು ಕಟ್ಟಿ ಹಾಕಿ, ರಾಜನ ಮುಂದೆ ತಂದು ನಿಲ್ಲಿಸಿದರು. ರಾಜನು ಅವನಿಗೆ ದಂಡನೆ ವಿಧಿಸಿದ.

ಆ ಸಂದರ್ಭದಲ್ಲಿ ಆ ಬೋಧಿಸತ್ವನು ಇನ್ನೊಂದು ಮಾತನ್ನು ಹೇಳಿದನು:

‘‘ಅನ್ನದ ತಪ್ಪಲೆ ಒಡೆದುಹೋಯಿತು. ಹೆಂಡತಿಯೂ ಮರಣ ಹೊಂದಿದಳು. ಭೂಮಿಯ ಮೇಲೆ ಗರ್ಭಪಾತ ಕೂಡ ಆಗಿಬಿಟ್ಟಿತು. ನೆಲದ ಮೇಲೆ ಚಿನ್ನ ಹರಡಿದ್ದರೂ, ಒಂದು ಜಿಂಕೆ ಅದರ ಮೇಲೆ ನಡೆದಾಡಿದರೆ ಏನು ಪ್ರಯೋಜನ? ಯಾವ ಪ್ರಯೋಜನವೂ ಇಲ್ಲ.’’

ಬುದ್ಧ ಭಗವಾನರು ಹೀಗೆ ನಾವಿಕನ ಕಥೆಯನ್ನು ಹೇಳಿದರು. ಭಿಕ್ಷುವಿಗೆ ಸತ್ಯದ ದರ್ಶನ ಮಾಡಿಸಿದರು. ಬಳಿಕ ರಹಸ್ಯವನ್ನು ಹೇಳಿದರು: ‘‘ಆ ಕಥೆಯ ನಾವಿಕನೇ, ಇಂದಿನ ಜನ್ಮದಲ್ಲಿ ನಿನಗೆ ಹೊಡೆದ ನಾವಿಕ. ನನ್ನ ಶಿಷ್ಯ ಆನಂದನೇ ಆ ರಾಜ. ಕಥೆಯಲ್ಲಿ ತಪಸ್ವಿಯಾಗಿದ್ದವನು ನಾನೇ. ’’

## ಶ್ರೀಮಾತೆಯವರ ಉಪದೇಶಗಳು



* ಹಳ್ಳಿಯಲ್ಲಿದ್ದಾಗ ನಾನು ಎಷ್ಟೋ ಬಾರಿ ನಡೆಯುವಾಗ ಒಣಗಿಹೋದ ಮಲವನ್ನು ತುಳಿದು ಬಿಟ್ಟಿದ್ದಿದೆ. ಎರಡು ಬಾರಿ ‘ಗೋವಿಂದ, ಗೋವಿಂದ’ ಎಂದು ಹೇಳಿಕೊಂಡೆ, ಎಲ್ಲವೂ ಶುದ್ಧವಾಗಿ ಬಿಟ್ಟಿತು. ಎಲ್ಲವೂ ಮನಸ್ಸನ್ನೇ ಅವಲಂಬಿಸಿದೆ. ಮನಸ್ಸಿನಲ್ಲೇ ಶುದ್ಧ, ಅಶುದ್ಧ ಎಲ್ಲವೂ. ಮನುಷ್ಯ ತನ್ನ ಮನಸ್ಸನ್ನು ಮೊದಲು ಮಲಿನಗೊಳಿಸಿಬಿಡುತ್ತಾನೆ. ಅದರಿಂದಲೇ ಅವನು ಇತರರ ದೋಷವನ್ನು ನೋಡುತ್ತಾನೆ. ನೀವು ಇತರರ ದೋಷವನ್ನು ನೋಡಿದರೆ ಅವನಿಗೇನಾಗುತ್ತದೆ? ಅದರಿಂದ ನಿಮಗೇ ಹಾನಿಯಾಗುತ್ತದೆ. ಚಿಕ್ಕಂದಿನಿಂದಲೇ ನನ್ನ ಸ್ವಭಾವ ಹೇಗಿತ್ತೆಂದರೆ, ನನಗೆ ಯಾರ ದೋಷವನ್ನೂ ನೋಡಲಾಗುತ್ತಿರಲಿಲ್ಲ. ಇನ್ನೊಬ್ಬರು ನನಗೆ ಯಾವುದೇ ಅಲ್ಪ ಸಹಾಯವನ್ನಾದರೂ ಮಾಡಿದ್ದರೆ, ಅದನ್ನು ನಾನು ನೆನೆಯಲು ಪ್ರಯತ್ನಿಸುತ್ತಿದ್ದೆ. ಬೇರೆಯವರ ದೋಷದರ್ಶನ ಮಾಡುವುದೆ? ದೋಷವನ್ನು ನೋಡಬಾರದು. ಅದನ್ನು ನಾನು ಕಲಿಯಲಿಲ್ಲ. ಇತರರ ದೋಷ ನೋಡದಿರುವುದು ಕ್ಷಮಾರೂಪದ ತಪಸ್ಸು.

* ಯಾರ ಮನಸ್ಸು ಶುದ್ಧವಾಗಿದೆಯೋ ಅವರು ಎಲ್ಲರಲ್ಲೂ ಶುದ್ಧವಾದುದನ್ನೇ ನೋಡುತ್ತಾರೆ.

* ಹಿಂದಿನ ಜನ್ಮದಲ್ಲಿ ಸಾಕಷ್ಟು ತಪಸ್ಸು, ಸಾಧನೆ ಮಾಡಿದ್ದರೆ ಮಾತ್ರ ಈ ಜನ್ಮದಲ್ಲಿ ಮನಸ್ಸು ಶುದ್ಧವಾಗಿರುತ್ತದೆ.

‘ಶ್ರೀಶಾರದಾದೇವಿ ವಚನವೇದ’ ದಿಂದ, ಪು.೨೧೩–೧೪